# ಆಧುನಿಕೋತ್ತರ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಮಸ್ಯೆ ಮತ್ತು ಸವಾಲುಗಳು

**ಸೋಮಶೇಖರಪ್ಪ ಹೆಚ್.**
ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು ಕನ್ನಡ ವಿಭಾಗ, ಎಸ್.ಎಸ್.ಎನ್ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹುಕ್ಕೇರಿ.

DOI: https://doi.org/10.5281/zenodo.18701186

## ABSTRACT:

ನಮ್ಮ ದೇಶದಲ್ಲಿ ಕೌಟುಂಬಿಕ ಪದ್ಧತಿ, ಸಂಸ್ಕೃತಿ, ಸಂಸ್ಕಾರಗಳು, ಕುಟುಂಬ ನಿರ್ವಹಣೆ, ಆರೈಕೆ ಮಾಡುವ ಜವಾಬ್ದಾರಿ ಅನಾದಿ ಕಾಲದಿಂದಲೂ ಬಂದಿರುವುದರಿಂದ ಸಣ್ಣ ವಯಸ್ಸಿನಿಂದಲೇ ಆಕೆಗೆ ಹಲವಾರು ನೀತಿ ನಿಯಮಗಳು, ಕಟ್ಟುಪಾಡುಗಳನ್ನು ಹಾಕಲಾಗುತ್ತದೆ. ಕನ್ನಡ ಸಾಹಿತ್ಯದ ಆಧುನಿಕೋತ್ತರ ಕಾಲಘಟ್ಟದಲ್ಲಿ ಸ್ತ್ರೀವಾದಿ ಸಾಹಿತ್ಯವು ಚಿಂತನಾ ಮತ್ತು ಚಳವಳಿಯಾಗಿ ರೂಪುಗೊಂಡಿದೆ. ಸಾಮಾಜಿಕ–ಸಾಂಸ್ಕೃತಿಕ ವ್ಯವಸ್ಥೆಯನ್ನು ಪ್ರಶ್ನಿಸುವ ಉದ್ದೇಶದಿಂದ ಸ್ತ್ರೀವಾದಿ ಬರವಣಿಗೆ ಉದ್ಭವಿಸಿದೆ. ಈ ಸಾಹಿತ್ಯವು ಮಹಿಳೆಯ ಅನುಭವ, ಅಸ್ತಿತ್ವ, ಸ್ವಾತಂತ್ರ್ಯ, ಲೈಂಗಿಕತೆ, ಶೋಷಣೆ ಹಾಗೂ ಗುರುತುಗಳ ಕುರಿತು ನೇರ ಮತ್ತು ಪ್ರಶ್ನಾತ್ಮಕ ಭಾಷೆಯಲ್ಲಿ ಚರ್ಚಿಸುತ್ತದೆ. ಆಧುನಿಕ ಮಹಿಳಾ ಸಾಹಿತ್ಯವನ್ನು ಸಂಪೂರ್ಣ ಮಹಿಳಾ ವಿರಚಿತ ಸಾಹಿತ್ಯದ ಹಿನ್ನೆಲೆಯನ್ನು ವಿಶಿಷ್ಟವಾಗಿ ಗುರುತಿಸಬಹುದು. ಸ್ವಾತಂತ್ರ್ಯಪೂರ್ವದ ಮಹಿಳಾ ಸಂವೇದನೆಗಳಲ್ಲಿ ತಮ್ಮ ವ್ಯಕ್ತಿತ್ವ ಮತ್ತು ಸ್ತ್ರೀ ಅನುಭವಿಸುವ ಸಂಕಟಗಳ ಬಗ್ಗೆ ವಿಷಾದವಿದ್ದರೂ, ಪಿತೃಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸದೇ ಕೌಟುಂಬಿಕ ನೆಲೆಯಲ್ಲಿ ಅದನ್ನು ಪೋಷಿಸುವ ಜವಾಬ್ದಾರಿಯನ್ನು ಹೆಣ್ಣೇ ಹೊರಬೇಕೆನ್ನುವ ಅಧೀನ ಭಾವ ಗೋಚರಿಸುತ್ತದೆ. ಅಲ್ಲದೇ ಕೊಡಗಿನ ಗೌರಮ್ಮ, ತಿರುಮಲಾಂಬ, ಸರಸ್ವತಿಬಾಯಿ ರಾಜವಾಡೆ, ತಿರುಮಲೆ ರಾಜಮ್ಮ ಮುಂತಾದವರ ಕೃತಿಗಳಲ್ಲಿ ದಾರ್ಶನಿಕತೆಯನ್ನು ಕಾಣುತ್ತೇವೆ. ಮಹಿಳಾ ಶೋಷಣೆಗಳು, ದೌರ್ಜನ್ಯಗಳು ಕೇವಲ ಒಂದೇ ಕ್ಷೇತ್ರಕ್ಕೆ ಸೀಮಿತವಾಗಿಲ್ಲ; ಕುಟುಂಬದಿಂದ ಹಿಡಿದು, ಹೊಲ–ಗದ್ದೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸರ್ಕಾರಿ ಮತ್ತು ಸರ್ಕಾರೇತರ ಕಚೇರಿಗಳಲ್ಲಿ ಕಂಡು ಬರುತ್ತವೆ. ಕುಟುಂಬದಲ್ಲಿ ಗಂಡ, ಮಾವ, ಮೈದುನ, ಅತ್ತೆ ಮತ್ತು ನಾದಿನಿಯರಿಂದ ಸೊಸೆಯ ಮೇಲೆ ದೌರ್ಜನ್ಯ, ಜಮೀನ್ದಾರಿ ಗಂಡಸರಿಂದ ಕೆಲಸದ ಮಹಿಳಾ ಕೂಲಿ ಕಾರ್ಮಿಕರ ಮೇಲೆ ದೌರ್ಜನ್ಯ, ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸಂತೆಗಳಲ್ಲಿ ಅಪರಿಚಿತರಿಂದ ಲೈಂಗಿಕ ಕಿರುಕುಳ, ಕಚೇರಿಗಳಲ್ಲಿ ಮ್ಯಾನೇಜರ್ ಮತ್ತು ಸಹ ಕೆಲಸಗಾರರಿಂದ ಲೈಂಗಿಕ ಶೋಷಣೆಗಳು ನಡೆಯುತ್ತವೆ. ಇವುಗಳ ವಿರುದ್ಧ ನಿಲ್ಲುವ ಸಾಮರ್ಥ್ಯದ ಅನಿವಾರ್ಯತೆ ಇದೆ.

## KEYWORDS:

ಕನ್ನಡ ಸಾಹಿತ್ಯ, ಆಧುನಿಕೋತ್ತರ ಕಾಲ, ಸ್ತ್ರೀವಾದಿ ಸಾಹಿತ್ಯ, ಲಿಂಗ ಅಸಮಾನತೆ, ಮಹಿಳಾ ಅಸ್ತಿತ್ವ, ಸಾಮಾಜಿಕ ನ್ಯಾಯ, ಲೈಂಗಿಕತೆ, ಕುಟುಂಬ.

ಒಂದು ಜೀವವನ್ನು ಸೃಷ್ಟಿಮಾಡುವ ಶಕ್ತಿ ಮಹಿಳೆಗೆ ಇದೆ ಎಂದಾದರೆ, ಖಂಡಿತವಾಗಿ ಅವಳಲ್ಲಿ ಅನಂತವಾದ ಶಕ್ತಿ ಇದೆ ಎಂದರ್ಥ. ಮಾತೃ ಶಕ್ತಿ, ವಾತ್ಸಲ್ಯ, ಸಹನೆ, ಪ್ರೀತಿ, ತಾಳ್ಮೆ, ಆರೈಕೆ, ಸತ್ಕಾರ, ಸನ್ಮಾನ, ಸಾಂತ್ವನ ಗುಣಗಳು ಆಕೆಗೆ ಹುಟ್ಟಿನಿಂದಲೇ ಬಂದಿರುತ್ತದೆ. ನಮ್ಮ ದೇಶದಲ್ಲಿ ಕೌಟುಂಬಿಕ ಪದ್ಧತಿ, ಸಂಸ್ಕೃತಿ, ಸಂಸ್ಕಾರಗಳು, ಕುಟುಂಬ ನಿರ್ವಹಣೆ, ಆರೈಕೆ ಮಾಡುವ ಜವಾಬ್ದಾರಿ ಅನಾದಿ ಕಾಲದಿಂದಲೂ ಬಂದಿರುವುದರಿಂದ ಸಣ್ಣ ವಯಸ್ಸಿನಿಂದಲೇ

ಆಕೆಗೆ ಹಲವಾರು ನೀತಿ ನಿಯಮಗಳು, ಕಟ್ಟುಪಾಡುಗಳನ್ನು ಹಾಕಲಾಗುತ್ತದೆ. ಕನ್ನಡ ಸಾಹಿತ್ಯದ ಆಧುನಿಕೋತ್ತರ ಕಾಲಘಟ್ಟದಲ್ಲಿ ಸ್ತ್ರೀವಾದಿ ಸಾಹಿತ್ಯವು ಚಿಂತನಾ ಮತ್ತು ಚಳವಳಿಯಾಗಿ ರೂಪುಗೊಂಡಿದೆ. ಸಾಮಾಜಿಕ–ಸಾಂಸ್ಕೃತಿಕ ವ್ಯವಸ್ಥೆಯನ್ನು ಪ್ರಶ್ನಿಸುವ ಉದ್ದೇಶದಿಂದ ಸ್ತ್ರೀವಾದಿ ಬರವಣಿಗೆ ಉದ್ಭವಿಸಿದೆ. ಈ ಸಾಹಿತ್ಯವು ಮಹಿಳೆಯ ಅನುಭವ, ಅಸ್ತಿತ್ವ, ಸ್ವಾತಂತ್ರ್ಯ, ಲೈಂಗಿಕತೆ, ಶೋಷಣೆ ಹಾಗೂ ಗುರುತುಗಳ ಕುರಿತು ನೇರ ಮತ್ತು ಪ್ರಶ್ನಾತ್ಮಕ ಭಾಷೆಯಲ್ಲಿ ಚರ್ಚಿಸುತ್ತದೆ.

ಆಧುನಿಕ ಮಹಿಳಾ ಸಾಹಿತ್ಯವನ್ನು ಸಂಪೂರ್ಣ ಮಹಿಳಾ ವಿರಚಿತ ಸಾಹಿತ್ಯದ ಹಿನ್ನೆಲೆಯನ್ನು ವಿಶಿಷ್ಟವಾಗಿ ಗುರುತಿಸಬಹುದು. ಮೊದಲಿನ ಸ್ವಾತಂತ್ರ್ಯಪೂರ್ವದ ಮಹಿಳಾ ಸಂವೇದನೆಗಳಲ್ಲಿ ತಮ್ಮ ವ್ಯಕ್ತಿತ್ವ ಮತ್ತು ಸ್ತ್ರೀ ಅನುಭವಿಸುವ ಸಂಕಟಗಳ ಬಗ್ಗೆ ವಿಷಾದವಿದ್ದರೂ, ಪಿತೃಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸದೇ ಕೌಟುಂಬಿಕ ನೆಲೆಯಲ್ಲಿ ಅದನ್ನು ಪೋಷಿಸುವ ಜವಾಬ್ದಾರಿಯನ್ನು ಹೆಣ್ಣೇ ಹೊರಬೇಕೆನ್ನುವ ಅಧೀನ ಭಾವ ಗೋಚರಿಸುತ್ತದೆ. ಅಲ್ಲದೇ ಕೊಡಗಿನ ಗೌರಮ್ಮ, ತಿರುಮಲಾಂಬ, ಸರಸ್ವತಿಬಾಯಿ ರಾಜವಾಡೆ, ತಿರುಮಲೆ ರಾಜಮ್ಮ ಮುಂತಾದವರ ಕೃತಿಗಳಲ್ಲಿ ದಾರ್ಶನಿಕತೆಯನ್ನು ಕಾಣುತ್ತೇವೆ. ಕನ್ನಡದ ಮೊದಲ ಕಾದಂಬರಿ ಎಂದು ಪ್ರಸಿದ್ಧವಾದ ತಿರುಮಲಾಂಬಾನವರ 'ಸುಶೀಲೆ'ಯಾಗಿರಲಿ, ಮಧ್ಯಮವರ್ಗದ ಹೆಣ್ಣುಗಳ ತುಡಿತಗಳು, ಸಾಂಪ್ರದಾಯಿಕ ಚೌಕಟ್ಟಿನಲ್ಲಿನ ತಲ್ಲಣಗಳನ್ನು ಚಿತ್ರಿಸಿ ಬರೆದ ಎಂ.ಕೆ. ಇಂದಿರಾರವರ 'ಎರಡು ಕನಸು', 'ಗೆಜ್ಜೆಪೂಜೆ', 'ಬಿಡುಗಡೆ', 'ಶುಭಮಂಗಳ' ಮುಂತಾದ ಕೃತಿಗಳಾಗಿರಲಿ, ಮಹಿಳೆಯರ ವಿವಿಧ ಮುಖಗಳ ಸಮಸ್ಯೆಗಳನ್ನು ಸಾಮಾಜಿಕ, ಮನೋವೈಜ್ಞಾನಿಕ ನೆಲೆಯ ಕಥಾಹಂದರದೊಳಗೆ ಕಟ್ಟಿಕೊಟ್ಟ ತ್ರಿವೇಣಿಯವರ 'ಸೋತು ಗೆದ್ದವಳು', 'ಶರಪಂಜರ', 'ಬೆಳ್ಳಿಮೋಡ' ಮುಂತಾದ ಕಾದಂಬರಿಗಳಲ್ಲಾಗಿರಲಿ, ಅನುಪಮಾ ನಿರಂಜನರ 'ಮಾಧವಿ' ಕಾದಂಬರಿಯಾಗಿರಲಿ ಮಹಿಳಾ ಪಾತ್ರಗಳ ಪ್ರಾತಿನಿಧ್ಯವಿದ್ದರೂ, ಅವು ಸಾಮಾಜಿಕ ನಡವಳಿಕೆಗೆ ಅತೀತವಾಗಿ ನಡೆದುಕೊಳ್ಳಲಾರದ ಪಾತ್ರಗಳು. ತಮ್ಮ ದುಃಸ್ಥಿತಿಗೆ ಈ ಹೆಣ್ತನವೇ ಕಾರಣವೆಂಬ ಮನೋಭೂಮಿಕೆಯಲ್ಲಿ ನರಳುವಂಥ ಪಾತ್ರಗಳು. ಅಂದಿನ ಲೇಖಕಿಯರ ಕೃತಿಗಳಲ್ಲಿ ಸಾಮಾಜಿಕ ಕಳಕಳಿ ಇದ್ದರೂ ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣು ಅನುಭವಿಸುತ್ತಿದ್ದ ಸಂಕಟ ನೋವುಗಳನ್ನು ಕಟ್ಟಿಕೊಟ್ಟರು. ಅದರಿಂದ ಹೊರಬರುವ ಮಾರ್ಗಗಳ ಕುರಿತು ಮೌನವಾದರು.

ಎರಡನೆಯ ತಲೆಮಾರಿಗೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸುವ ಸ್ವಾತಂತ್ರ್ಯ ಆಕಾಂಕ್ಷೆ ಹೊಂದಿದ್ದರೂ ಅದನ್ನು ದಕ್ಕಿಸಿಕೊಳ್ಳುವಲ್ಲಿ ಅಸಮರ್ಥತೆ ಇರುವುದರಿಂದ ಆ ವ್ಯವಸ್ಥೆಯನ್ನು ಮೀರಿ ಬದುಕುವ ಪರಿಸರ ನಿರ್ಮಿತಿಯನ್ನು ಸೃಷ್ಟಿಸಲಾಗದ ಅಸಹಾಯಕತೆಗೆ ಒಳಗಾಗಿದ್ದರು. ವೀಣಾ ಶಾಂತೇಶ್ವರರ 'ಗಂಡಸರು' ಕಾದಂಬರಿಯ 'ಶಾಂತಿ', 'ನಿರಾಕರಣೆ' ಕಥೆಯ 'ಶಕುಂತಲೆ', ಗೀತಾ ನಾಗಭೂಷಣರ 'ಅವ್ವ' ಕಥೆ, 'ಹಸಿಮಾಂಸ ಮತ್ತು ಹದ್ದುಗಳು', ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿ, ವೈದೇಹಿಯವರ 'ಅಮ್ಮಚ್ಚಿಯೆಂಬ ನೆನಪು' ಕಥೆ, 'ಅಕ್ಕು' ಕಾದಂಬರಿ, ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯ ನಾದಿರಾ, ಫಾತಿಮಾ ಹೀಗೆ ಇವರೆಲ್ಲರ ಪ್ರಮುಖ ಪಾತ್ರಗಳು ಪ್ರತಿಭಟನೆಯ ಪಾತ್ರಗಳಾಗಿದ್ದರೂ, ಅಸ್ತಿತ್ವದ ಹೊಸ ರೂಪದ ಆಕಾಂಕ್ಷೆ ಹೊಂದಿದ್ದರೂ ಸನ್ನಿವೇಶದ ಕೈಗೊಂಬೆಯಂತೆ ಚಿತ್ರಿಸಲ್ಪಟ್ಟಿವೆ. ತಾಯಿಯಾಗಿ, ಗೆಳತಿಯಾಗಿ, ಪತ್ನಿಯಾಗಿ ತನ್ನ ತ್ಯಾಗವನ್ನು ನೀಡಿಯೂ ಜಗತ್ತಿನ ನ್ಯಾಯ ತಕ್ಕಡಿಯಲ್ಲಿ ಆಕೆಗೆ ಸಿಗದ ಜಯದ ಕುರಿತು ವಿಷಾದವಿದೆ. ಆದರೆ ಇದೇ ತಲೆಮಾರಿನ ಕಾವ್ಯ ಜಗತ್ತಿನಲ್ಲಿ ಕನ್ನಡ ಮಹಿಳಾ ಕಾವ್ಯದ ನಿರ್ಭಯದ

ನುಡಿಗಳನ್ನು ಎನ್.ವಿ. ಭಾಗ್ಯಲಕ್ಷ್ಮಿಯವರ ಕೃತಿಯಲ್ಲಿ ಕಾಣಬಹುದು.

ಮೂರನೇ ತಲೆಮಾರಿನ ಮಹಿಳಾ ಸಾಹಿತ್ಯ ಭಿನ್ನ ಸಾಂಸ್ಕೃತಿಕ ಸಾಮಾಜಿಕ ಅನುಭವಗಳಿಂದ ಗೋಚರಿಸುತ್ತವೆ. ಸ್ತ್ರೀ ಸ್ವತಂತ್ರ ವ್ಯಕ್ತಿತ್ವ ಮತ್ತು ಸ್ವಾಯತ್ತ ನೆಲೆಯಲ್ಲಿ ಪ್ರಕಟಗೊಳ್ಳುತ್ತವೆ. ಪ್ರತಿಭಾ ನಂದಕುಮಾರ, ಲಲಿತ ಸಿದ್ದಬಸವಯ್ಯ, ಸವಿತಾ ನಾಗಭೂಷಣ, ಎಚ್. ಎಲ್. ಪುಷ್ಪ, ದು. ಸರಸ್ವತಿ, ಎಚ್. ಎಸ್. ಮುಕ್ತಾಯಕ್ಕ, ಹೇಮಾ ಪಟ್ಟಣಶೆಟ್ಟಿ, ಎಲ್.ಸಿ. ಸುಮಿತ್ರಾ, ಎಸ್.ವಿ. ಪ್ರಭಾವತಿ, ಕೆ. ಷರೀಫಾ, ಮಮತಾ ಸಾಗರ, ಭಾರತಿ ಬಿ.ವಿ., ಆನಂತರದ ತಲೆಮಾರಿನ ವಿಭಾ, ವಿನಯಾ ಒಕ್ಕುಂದ, ತಾರಿಣಿ ಶುಭದಾಯಿನಿ, ಸುನಂದಾ ಕಡಮೆ, ಮಾಧವಿ ಭಂಡಾರಿ ಕೆರೆಕೋಣ, ನಾಗರೇಖಾ ಗಾಂವಕರ, ತೇಜಶ್ರೀ, ಜ.ನಾ., ರೇಣುಕಾ ರಮಾನಂದ, ಶ್ರೀದೇವಿ ಕೆರೆಮನೆ, ಅಕ್ಷತಾ ಹುಂಚದಕಟ್ಟೆ, ಪೂರ್ಣಿಮಾ ಮಾಳಗಿಮನಿ, ಮಂಜುಳಾ ಹಿರೇಮಠ, ಅಕ್ಷತಾ ಕೃಷ್ಣಮೂರ್ತಿ, ಭುವನಾ ಹಿರೇಮಠ, ಕಾವ್ಯಾ ಕಡಮೆ ಇತ್ಯಾದಿ ಮಹಿಳಾ ಸಾಹಿತಿಗಳ ಬಹುಮುಖ್ಯ ಪ್ರಜ್ಞೆ ಪರ್ಯಾಯದ ಹುಡುಕಾಟವಾಗಿದೆ. ಸಮಕಾಲೀನ ಸಂದರ್ಭಗಳ ಎಲ್ಲ ಸಂಗತಿಗಳಿಗೆ ಧ್ವನಿಯಾಗುತ್ತ, ಸ್ತ್ರೀ ಸ್ವತಂತ್ರ ದೃಷ್ಟಿಕೋನವನ್ನು ಬೆಳೆಸಿಕೊಳ್ಳುತ್ತ ಸಾಗುತ್ತಿದೆ.

ಆಧುನಿಕೋತ್ತರ ನಿರೂಪಣಾ ತಂತ್ರಗಳು ಮತ್ತು ಸ್ತ್ರೀವಾದಿ ಸಿದ್ಧಾಂತದ ಆಳವಾದ ಸಂಶ್ಲೇಷಣೆಯನ್ನು ಒಳಗೊಂಡಿವೆ, ಸಮಕಾಲೀನ ಭಾರತೀಯ ಸಮಾಜದಲ್ಲಿ ಮಹಿಳೆಯರ ಜೀವನದ ವಿಘಟಿತ ವಾಸ್ತವತೆಗಳು ಮತ್ತು ಮಾನಸಿಕ ಜಟಿಲತೆಗಳನ್ನು ಚಿತ್ರಿಸುತ್ತವೆ. ಅವರ ಕಥೆ, ಕಾದಂಬರಿಗಳಲ್ಲಿ ಪ್ರಜ್ಞೆ, ಸಂಕೇತ ಮತ್ತು ಆತ್ಮಾವಲೋಕನ ನಿರೂಪಣೆಯ ಪ್ರವಾಹವನ್ನು ಬಳಸಿಕೊಂಡು ಸ್ವತಂತ್ರ ರೀತಿಯಲ್ಲಿ ಮನೆಯಿಂದ ಹೊರಗೆ ಹೋಗಿ ವ್ಯವಹಾರ ನಡೆಸುವುದು ಪುರುಷ ಪ್ರಧಾನ ಸಮಾಜದಲ್ಲಿ ಅತ್ಯಂತ ಕಷ್ಟವೇ ಸರಿ. ಇತ್ತೀಚಿನ ದಿನಗಳಲ್ಲಿ ಮಹಿಳೆಯ ದೈನಂದಿನ ಬದುಕಿನ ಸಂಕೀರ್ಣತೆ, ಮನೋಭಾವ, ವಿಮರ್ಶಾ ನಿರ್ಲಕ್ಷ್ಯ, ಭಾಷಾ ಅಸಮರ್ಪಕತೆ, ಪ್ರಕಾಶನ ಹಾಗೂ ಪ್ರಸಾರಗಳ ಸಿದ್ಧಾಂತ–ಅನುಭವದ ಸಂಘರ್ಷಗಳಂತಹ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿವೆ.

ಆಧುನಿಕೋತ್ತರ ಕನ್ನಡ ಸ್ತ್ರೀವಾದಿ ಸಾಹಿತ್ಯವು ಪ್ರಮುಖವಾಗಿ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡುತ್ತದೆ. ಸ್ತ್ರೀವಾದಿ ಸಾಹಿತ್ಯವು ಕೇವಲ ಮಹಿಳೆಯರ ಪ್ರಶ್ನೆಯಲ್ಲ, ಸಾಮಾಜಿಕ ನ್ಯಾಯ ಮತ್ತು ಮಾನವೀಯ ಸಮಾನತೆಯ ಹೋರಾಟವೆಂಬುದನ್ನು ಒತ್ತಿ ಹೇಳುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳ ಮುಖಾಂತರ ಎಲ್ಲಾ ರಂಗಗಳಲ್ಲಿ ಮಹಿಳೆ ಗುರುತಿಸಿಕೊಂಡಿರುವುದು, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಪುರುಷರಿಗಿಂತ ಕಡಿಮೆಯೇನು ಇಲ್ಲ ಎಂಬಷ್ಟರ ಮಟ್ಟಿಗೆ ತೋರಿಸಿಕೊಂಡಿದ್ದರೂ ಸಹ, ಹಲವಾರು ದೌರ್ಜನ್ಯಗಳು ಮಹಿಳೆಯರನ್ನು ದಿನವೂ ಕಾಡುತ್ತಿವೆ. ಶೋಷಣೆ ಎಲ್ಲಾ ನೆಲೆಯಲ್ಲಿಯೂ ಜೀವಂತವಾಗಿದ್ದು ವಿಶಾಲವಾದ ರೂಪ ಪಡೆದುಕೊಂಡಿದೆ. ಗಂಡು ಹೆಣ್ಣನ್ನು ದುರ್ಬಲಗೊಳಿಸುತ್ತಲೇ ಹೋಗುತ್ತಿದ್ದಾನೆ. ಅಲ್ಲದೆ ವಿದ್ಯಾವಂತ ಮಹಿಳೆಯರಿಂದ ಅವಿದ್ಯಾವಂತ ಮಹಿಳೆಯರ ಮೇಲೆ, ಶ್ರೀಮಂತ ಮಹಿಳೆಯರಿಂದ ಬಡ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ ಹೊಸತೇನಲ್ಲ. ಶಿಕ್ಷಣದಲ್ಲಿ, ಉದ್ಯೋಗದಲ್ಲಿ, ರಾಜಕೀಯದಲ್ಲಿ ಮತ್ತು ಸಮಾಜದಲ್ಲಿರುವ ಅವಕಾಶಗಳನ್ನು ನಿರಾಕರಿಸುವುದೇ ಮಹಿಳಾ ಶೋಷಣೆ ಆಗಿದೆ. ಇವುಗಳಲ್ಲದೇ ಮಹಿಳೆ ಲೈಂಗಿಕವಾಗಿಯೂ ಪುರುಷರಿಂದ ಶೋಷಣೆ ಅನುಭವಿಸುತ್ತಿದ್ದಾಳೆ. ಮುಖ್ಯವಾದವುಗಳು ಲಿಂಗ ತಾರತಮ್ಯ, ಹಿಂಸೆ, ಕಡಿಮೆ ವೇತನ,

ಶಿಕ್ಷಣದ ಕೊರತೆ, ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳು ಮಹಿಳೆಯರನ್ನು ಹೆಚ್ಚಾಗಿ ಕಾಡುತ್ತವೆ. ಬಲಾತ್ಕಾರದ ಪ್ರಕರಣಗಳಂತೂ ಬೆಚ್ಚಿ ಬೀಳಿಸುವಂತೆ ಎಲ್ಲ ವಯೋಮಾನದ ಮಹಿಳಾ ಸಮೂಹವನ್ನು ಬಾಧಿಸುತ್ತಿದೆ.

**ಮಹಿಳೆಯರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು:**

ಆಧುನಿಕೋತ್ತರದ ಸಂದರ್ಭದಲ್ಲಿ ಮಹಿಳೆಯರು ಸರ್ವಾಧಿಕಾರತ್ವ ಮತ್ತು ವಿನಾಶಕಾರಿ ಹವಾಮಾನ ಬದಲಾವಣೆಯ ಪರಿಣಾಮಗಳ ಸಮಯದಲ್ಲಿ, ಮಹಿಳೆಯರು ಶಿಕ್ಷಣ, ಕೆಲಸ, ಆರೋಗ್ಯ ರಕ್ಷಣೆ, ಕಾನೂನು ಹಕ್ಕುಗಳು, ಹಿಂಸೆ ಮತ್ತು ಇನ್ನೂ ಹೆಚ್ಚಿನವುಗಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾಳೆ. ಈ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ, ಲಿಂಗ ಸಮಾನತೆ, ಬಲವಾದ ಮಾನವ ಹಕ್ಕುಗಳ ರಕ್ಷಣೆ ಮತ್ತು ಎಲ್ಲಾ ಜನರಿಗೆ ಸುರಕ್ಷತೆಯನ್ನು ಸಾಧಿಸಲು ಜಗತ್ತು ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಹೆಣ್ಣಿನ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಭ್ರೂಣ ಹತ್ಯೆ, ಅನಕ್ಷರತೆ, ಕಿರುಕುಳ, ತಾರತಮ್ಯ, ಅವಮಾನ, ಅಗೌರವ, ಅತ್ಯಾಚಾರ ಮೊದಲಾದ ಅನ್ಯಾಯಗಳು ನಡೆಯುತ್ತಲೇ ಇವೆ. ಇವು ಹತೋಟಿಗೆ ಬರಬೇಕಾದರೆ ಮೊದಲು ಅವಳಿಗೆ ಬಾಲ್ಯದಿಂದಲೇ ತನ್ನ ಅಧಿಕಾರ, ಹಕ್ಕುಗಳ ಅರಿವು ತಿಳಿಸಬೇಕಾಗುತ್ತದೆ. ಈ ಅರಿವು ಮೂಡಿಸುವ ಜವಾಬ್ದಾರಿ ನಮ್ಮ ಸಾಹಿತ್ಯದಿಂದ ಸಾಧ್ಯ. ಶಾಲಾ ಕಲಿಕೆಯಲ್ಲಿ ಅವಕಾಶ ವಂಚಿತಳಾದ ಇವಳ ಸಾಮಾಜಿಕ ಬೆಳವಣಿಗೆಯ ಗತಿಯೂ ಕುಂದಿದೆ. ಹೆಣ್ಣೊಬ್ಬಳು ತನ್ನ ಶಕ್ತಿ ಸಾಮರ್ಥ್ಯಗಳ ಬಲದಿಂದ ಬದುಕಬೇಕು ಹಾಗೂ ಎಲ್ಲ ಅಡ್ಡಿ ಆತಂಕಗಳನ್ನು ಸ್ವತಃ ನಿಭಾಯಿಸಿಕೊಳ್ಳಬೇಕಾದರೆ ಅವಳು ಶಿಕ್ಷಿತಳಾಗಬೇಕು. ಹೆಣ್ಣು ಮಕ್ಕಳೆಲ್ಲ ಶಿಕ್ಷಿತರಾದಾಗ ಮಾತ್ರ, ಸಂವಿಧಾನದ ಕಲ್ಪನೆಯ ಭಾರತವನ್ನು ನಾವು ತಲುಪಲು ಸಾಧ್ಯ.

ಲಿಂಗ ತಾರತಮ್ಯ ಮತ್ತು ದೈಹಿಕ ಹಿಂಸೆಗಳು ನಡೆಯುತ್ತಲೇ ಬಂದಿವೆ. ಅಲ್ಲದೆ ವರದಕ್ಷಿಣೆ, ಕೌಟುಂಬಿಕ ಹಿಂಸೆ, ಲೈಂಗಿಕ ಕಿರುಕುಳ, ಆಸಿಡ್ ದಾಳಿಗಳು, ಜಾತಿ ವ್ಯವಸ್ಥೆ ಮತ್ತು ಪುರುಷ ಪ್ರಧಾನ ಧೋರಣೆಗಳಿಂದಾಗಿ ಮಹಿಳೆಯರ ಆಯ್ಕೆಗಳ ಮೇಲೆ ನಿರ್ಬಂಧ ನಡೆಯುತ್ತಲೇ ಬಂದಿವೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣದ ಕೊರತೆ ಮತ್ತು ತಾಂತ್ರಿಕ ಜ್ಞಾನದ ಅಂತರ, ಆರ್ಥಿಕ ಸ್ವಾತಂತ್ರ್ಯದ ಕೊರತೆ, ಹಣಕಾಸು ನಿರ್ವಹಣೆಯಲ್ಲಿ ಸೀಮಿತ ಅವಕಾಶ ಮತ್ತು ಮಾನವ ಹಕ್ಕುಗಳ, ವೃತ್ತಿಜೀವನದ ಪೂರೈಕೆಯ ಹಿನ್ನಡೆಯ ಸಮಸ್ಯೆಗಳು ನಿತ್ಯ ಕಾಡುತ್ತಿವೆ.

**ಸ್ತ್ರೀಯರು ಎದುರಿಸುತ್ತಿರುವ ಸವಾಲುಗಳು:**

ಪುರುಷರ ಸರ್ವಾಧಿಕಾರತ್ವ ಮತ್ತು ವಿನಾಶಕಾರಿ ಹವಾಮಾನ ಬದಲಾವಣೆಯ ಪರಿಣಾಮಗಳ ಸಮಯದಲ್ಲಿ, ಮಹಿಳೆಯರು ಶಿಕ್ಷಣ, ಕೆಲಸ, ಆರೋಗ್ಯ ರಕ್ಷಣೆ, ಕಾನೂನು ಹಕ್ಕುಗಳು, ಹಿಂಸೆ ಮತ್ತು ಇನ್ನೂ ಹೆಚ್ಚಿನವುಗಳಿಗೆ ಸಂಬಂಧಿಸಿದ ಹಲವು ಸವಾಲುಗಳನ್ನು ಎದುರಿಸುತ್ತಾರೆ. ಈ ಸವಾಲು ಅರ್ಥಮಾಡಿಕೊಳ್ಳುವ ಮೂಲಕ, ಲಿಂಗ ಸಮಾನತೆ, ಬಲವಾದ ಮಾನವ ಹಕ್ಕುಗಳ ರಕ್ಷಣೆ ಮತ್ತು ಸುರಕ್ಷತೆಯನ್ನು ತರಬೇಕಾಗಿದೆ.

ಶತಮಾನಗಳಿಂದ, ಸಮಾಜವು ಮಹಿಳೆಯರು ಮಾಡುವ ಕೆಲಸವನ್ನು ಕಡಿಮೆ ಅಂದಾಜು ಮಾಡಿದೆ. ಒಂದೇ ಕೆಲಸಕ್ಕೆ ಮಹಿಳೆಯರಿಗೆ ಪುರುಷರಿಗಿಂತ ಕಡಿಮೆ ವೇತನ ನೀಡಲಾಗುತ್ತದೆ. ಉದ್ಯೋಗಗಳಲ್ಲಿ ಲಿಂಗ ವೇತನದ ಅಂತರವು ಇನ್ನೂ ಅಸ್ತಿತ್ವದಲ್ಲಿದೆ ಮತ್ತು ಹೆಚ್ಚುತ್ತಿದೆ.

ಮಹಿಳೆಯರು ದೈಹಿಕ, ಮಾನಸಿಕ ನೋವನ್ನು ಅನುಭವಿಸಿದ್ದಾರೆ. ಯುವಕರು, ವೃದ್ಧ ಮಹಿಳೆಯರು, ನಿರಾಶ್ರಿತರು, ಜನಾಂಗೀಯ ಅಲ್ಪಸಂಖ್ಯಾತರು ಲಿಂಗ ಆಧಾರಿತ ಹಿಂಸೆ ಅನುಭವಿಸುತ್ತಿದ್ದಾರೆ. ಜೊತೆಗೆ ವಿಶಿಷ್ಟ ಕಳಂಕ ಮತ್ತು ತಾರತಮ್ಯವನ್ನು ಎದುರಿಸುತ್ತಾರೆ. ತಾಯಿಯ ಆರೋಗ್ಯ ಸೇವೆಯಂತಹ ಮಹಿಳೆಯರ ಮೇಲೆ ಪರಿಣಾಮ ಬೀರುವ ವಿಷಯಗಳಿಗೆ ಸಂಶೋಧನೆ ಮತ್ತು ಚಿಕಿತ್ಸೆಯಲ್ಲಿ ನಿರಂತರ ಅಂತರಗಳಿವೆ. ಎಲ್ಲಾ ಮಕ್ಕಳು ಶಿಕ್ಷಣ ಪಡೆಯಲು ಅರ್ಹರು, ಆದರೆ ಹುಡುಗಿಯರು ಐತಿಹಾಸಿಕವಾಗಿ ಹೆಚ್ಚಿನ ತಾರತಮ್ಯವನ್ನು ಎದುರಿಸಿದ್ದಾರೆ. ಹುಡುಗಿಯರು ಇನ್ನೂ ಶಾಲೆಗೆ ಹೋಗುತ್ತಿಲ್ಲ. ಕಾರಣಗಳಲ್ಲಿ ಬಡತನ, ಲಿಂಗ ಆಧಾರಿತ ಹಿಂಸೆ, ಬಾಲ್ಯ ವಿವಾಹ ಮತ್ತು ಸುರಕ್ಷತೆ, ನೈರ್ಮಲ್ಯ ಸಂಪನ್ಮೂಲಗಳ ಕೊರತೆ ಸೇರಿವೆ. ಪುರುಷರಿಗಿಂತ ಮಹಿಳೆಯರು ಹೆಚ್ಚು ಆಹಾರ ಅಭದ್ರತೆಯನ್ನು ಎದುರಿಸುತ್ತಾರೆ. ಮಹಿಳೆಯರು ಅಸಮಾನ ಚಿಕಿತ್ಸೆಯನ್ನು ಮತ್ತು ಗರ್ಭಾವಸ್ಥೆಯಲ್ಲಿ ಅಪೌಷ್ಟಿಕತೆಗೆ ಹೆಚ್ಚು ಗುರಿಯಾಗುತ್ತಾರೆ. ಹುಡುಗಿಯರು ಮತ್ತು ಯುವತಿಯರು ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದು ಸರಿಯಲ್ಲ ಎಂದು ಭಾವಿಸುವ ಸಮುದಾಯಗಳಲ್ಲಿ ಸಮಾನ ರಾಜಕೀಯ ಪ್ರಾತಿನಿಧ್ಯ ದೊರೆಯುವವರೆಗೆ ಸಮಾಜವು ಲಿಂಗ ಸಮಾನತೆಯನ್ನು ಸಾಧಿಸಲು ಸಾಧ್ಯವಿಲ್ಲ.

ಮಹಿಳಾ ಶೋಷಣೆಗಳು, ದೌರ್ಜನ್ಯಗಳು ಕೇವಲ ಒಂದೇ ಕ್ಷೇತ್ರಕ್ಕೆ ಸೀಮಿತವಾಗಿಲ್ಲ; ಕುಟುಂಬದಿಂದ ಹಿಡಿದು, ಹೊಲ-ಗದ್ದೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸರ್ಕಾರಿ ಮತ್ತು ಸರ್ಕಾರೇತರ ಕಚೇರಿಗಳಲ್ಲಿ ಕಂಡು ಬರುತ್ತವೆ. ಕುಟುಂಬದಲ್ಲಿ ಗಂಡ, ಮಾವ, ಮೈದುನ, ಅತ್ತೆ ಮತ್ತು ನಾದಿನಿಯರಿಂದ ಸೊಸೆಯ ಮೇಲೆ ದೌರ್ಜನ್ಯ, ಜಮೀನ್ದಾರಿ ಗಂಡಸರಿಂದ ಕೆಲಸದ ಮಹಿಳಾ ಕೂಲಿ ಕಾರ್ಮಿಕರ ಮೇಲೆ ದೌರ್ಜನ್ಯ, ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸಂತೆಗಳಲ್ಲಿ ಅಪರಿಚಿತರಿಂದ ಲೈಂಗಿಕ ಕಿರುಕುಳ, ಕಚೇರಿಗಳಲ್ಲಿ ಸಹ ಕೆಲಸಗಾರರಿಂದ ಲೈಂಗಿಕ ಶೋಷಣೆಗಳು ನಡೆಯುತ್ತವೆ. ಇವುಗಳ ವಿರುದ್ಧ ನಿಲ್ಲುವ ಅನಿವಾರ್ಯತೆ ಇದೆ.

ಪುರುಷ ಪ್ರಧಾನ ವ್ಯವಸ್ಥೆಯನ್ನು ವೈಭವೀಕರಿಸುವ, ಮಹಿಳೆಯನ್ನು ಹೆಂಡತಿ, ತಾಯಿ ಹಾಗೂ ಆಶ್ರಿತಳಂತೆ ಚಿತ್ರೀಕರಿಸುವುದನ್ನು ಕಂಡಂತೆ, ಅವಳನ್ನು ಸಾಮಾಜಿಕ ವ್ಯವಸ್ಥೆಯ ಬಹುಮುಖ್ಯ ಭಾಗವೆಂಬ ಚಿತ್ರಣ ಇಲ್ಲವೇ ಇಲ್ಲ ಎನ್ನಬಹುದು. ಹಾಗೆಯೇ ಮಹಿಳೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ, ದಬ್ಬಾಳಿಕೆ ವಿರುದ್ಧ ಸಿಡಿದೇಳುವ, ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಹಾಗೂ ನ್ಯಾಯೋಚಿತ ತೀರ್ಮಾನಗಳನ್ನು ತೆಗೆದುಕೊಳ್ಳುವ ದಿಟ್ಟ ಹೆಣ್ಣನ್ನಾಗಿ ಚಿತ್ರಿಸುವುದು ಅತ್ಯಂತ ವಿರಳ. ಮಹಿಳೆಯನ್ನು ಕೇವಲ ಕಾಮದ ಗೊಂಬೆಯನ್ನಾಗಿ ಚಿತ್ರಿಸುವ ಜಾಹೀರಾತು ಮಾಧ್ಯಮಗಳಂತೂ ನೇರವಾಗಿ ಮಹಿಳಾ ವಿರೋಧಿ ಎನ್ನಬಹುದು. ಮಹಿಳೆಯರ ಮೇಲಿನ ಶೋಷಣೆ ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಅಡುಗೆ ಮನೆಯಿಂದ ಹಿಡಿದು ಅಧಿಕಾರ ವರ್ಗದ ಎಲ್ಲಾ ಕ್ಷೇತ್ರಗಳಿಗೂ ಇದರ ಛಾಪು ಆವರಿಸಿಕೊಂಡಿದೆ. ಕೆಲವು ಲೈಂಗಿಕ ಶೋಷಣೆ, ಲೈಂಗಿಕ ಕಿರುಕುಳಗಳಿಗೆ ಮೂಕ ಸಾಕ್ಷಿಗಳಾಗಿವೆ. ಲೈಂಗಿಕ ಕಿರುಕುಳವನ್ನು ತಡೆಯಲು ಯಾವುದೇ ಅಸ್ತ್ರವನ್ನು ಜಾರಿಗೆ ತಂದರೂ ಅದನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಅನೇಕ ಕಾಯ್ದೆಗಳು ಇದ್ದರೂ ಸಹಿತ ದಿನಬೆಳಗಾದಂತೆ ಮಹಿಳೆಯರ ಮೇಲೆ ಹಿಂಸೆ, ಅತ್ಯಾಚಾರಗಳಂತಹ ಅಪರಾಧಗಳು ನಡೆಯುತ್ತಿವೆ. ಮಹಿಳೆಯರು ಮಹಿಳಾ ಸಂಘ, ಉಚಿತ ಕಾನೂನು ಸಲಹಾ ಸಂಸ್ಥೆಗಳನ್ನು ಸಂಪರ್ಕಿಸಿ ಅವರು ಯಾವುದೇ ರೀತಿಯ ಆರ್ಥಿಕ ಒತ್ತಡಗಳನ್ನು ನೀಡದೆ ಉಚಿತವಾಗಿ

ವಕೀಲರನ್ನು ನೇಮಿಸಿ ಅವರ ಮೂಲಕ ಕಾನೂನಿನ ರೀತಿಯಲ್ಲಿ ಕ್ರಮಕೈಗೊಂಡು ಅಪರಾಧಿಗಳನ್ನು ಶಿಕ್ಷೆಗೆ ಒಳಪಡಿಸುವಂತಾಗಬೇಕು. ಆದರೆ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿಯೇ ಧೂಳು ಹಿಡಿಯುತ್ತಿವೆ, ಬೇಲಿಯೇ ಎದ್ದು ಹೊಲ ಮೇಯ್ದಾಗ ಯಾರೂ ಏನು ಮಾಡಲು ಸಾಧ್ಯವಿಲ್ಲ ಎಂಬಂತಾಗಿದೆ ಈಗಿನ ಸಮಾಜ ಮತ್ತು ಕಾನೂನು.

ಮಹಿಳಾ ಹಕ್ಕುಗಳು ಮತ್ತು ಅಧಿಕಾರಗಳ ರಕ್ಷಣೆಯನ್ನು ಮಾಡುವ ಜವಾಬ್ದಾರಿ ನಾಗರಿಕ ಸಮಾಜದ ಮೇಲಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಸಿಗಬೇಕಾದ ಹಕ್ಕು ಅಧಿಕಾರಗಳನ್ನು ಕೊಡಬೇಕಾಗಿದೆ. ಸ್ತ್ರೀ ಶಿಕ್ಷಣ, ಸ್ತ್ರೀ ಉದ್ಯೋಗ, ಮಹಿಳಾ ಸಂಘಟನೆ, ಮಹಿಳಾ ಕಾನೂನುಗಳು ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಬೇಕಾಗಿದೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀವಾದಿ ಸಾಹಿತ್ಯವು ಒಂದು ಶಕ್ತಿಶಾಲಿ ಚಿಂತನಾ ಪ್ರವಾಹವಾಗಿದೆ. ಇದು ಮಹಿಳೆಯರ ಜೀವನದ ನಿಜವಾದ ಅನುಭವಗಳನ್ನು ಸಾಹಿತ್ಯದ ಮೂಲಕ ಸಮಾಜದ ಮುಂದೆ ತರುತ್ತಿದೆ. ಸಾಹಿತ್ಯವು ಸಮಾಜದ ಮನೋಭಾವ ಬದಲಿಸುವ ಸಾಮರ್ಥ್ಯ ಹೊಂದಿರುವುದರಿಂದ ಭವಿಷ್ಯದಲ್ಲಿ ಸಮಗ್ರ ವಿಮರ್ಶೆ, ಶಿಕ್ಷಣ ಮತ್ತು ಸಮಾನ ಅವಕಾಶಗಳು ದೊರಕಿದರೆ ಸ್ತ್ರೀವಾದಿ ಸಾಹಿತ್ಯ ಇನ್ನಷ್ಟು ಬಲಿಷ್ಠವಾಗಲಿದೆ.

**ಪರಾಮರ್ಶನ ಗ್ರಂಥಗಳು:**


1. ಗಾಯತ್ರಿ ಎನ್., (1996), ಮಹಿಳೆ ಬಿಡುಗಡೆಯ ಹಾದಿಯಲ್ಲಿ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್.
2. ಪ್ರಭಾ ಎನ್., (2003), ಕೌಟುಂಬಿಕ ಹಿಂಸಾಚಾರ ಮತ್ತು ಕಾನೂನುಗಳು (ಐಕ್ಯರಂಗ, ಸಂಪುಟ 25, ಸಂಚಿಕೆ 11), ಐಕ್ಯರಂಗ ಪತ್ರಿಕೆ.
3. ಶೃತಿ ಜಿ. ಎಂ., (2006), ಮಹಿಳಾ ಶೋಷಣೆ (ಕೃತಿ: ಮಹಿಳಾ ಸಬಲೀಕರಣದ ವಿಭಿನ್ನ ನೆಲೆಗಳು, ಸಂ: ಡಾ. ಶಿವಚಿತ್ತಪ್ಪ ಕೆ.), ಮೈಸೂರು: ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.